# ಬುದ್ಧ ಜಂಗಮ

■ ಬಿದಲೋಟಿ ರಂಗನಾಥ್
ಕಲೆ: ಗುರು ನಾವಳ್ಳಿ

ಕೆನ್ನೆ ಮೇಲೆ ಮುತ್ತಿಟ್ಟ ಇಬ್ಬನಿಯ ಬಿಂದು ಬಸವನ ಹುಳುವಿನಂತೆ ತೆವಳುತ್ತಿದ್ದುದನ್ನು ಸರಕ್ಕನೆ ತೀಡಿಕೊಂಡ ಅವನು ಎಚ್ಚರವಾದ. ಸುತ್ತಲೂ ಕಣ್ಣಾಯಿಸಿದ. ಏನೂ ಕಾಣುತ್ತಿಲ್ಲ. ಬರೀ ಗವ್ವೆನ್ನುವ ಕತ್ತಲು ಬಿಟ್ಟರೆ, ನಡೆದೂ ನಡೆದೂ ಕಾಲಿನ ಶಕ್ತಿ ಕುಂದಿ ಯಾವಾಗ ನೆಲಕ್ಕುರುಳಿದನೋ, ಸುಸ್ತಾಗಿ ಕೂತಿದ್ದ ನೆನಪು. ಎಲ್ಲಿಗಂತ ಹೋಗಲಿ? ಯಾಕೋ ನಾಗರಿಕ ಸಮಾಜದ ಗೋಜಲೇ ಬೇಡವೆನಿಸುತ್ತಿದೆ. ಹುಟ್ಟಿದ ಪ್ರತಿ ವ್ಯಕ್ತಿಯ ಮನಸು ತಿಳಿನೀಲಾಕಾಶದಂತೆ ಬೆಳಗುತ್ತದೆ. ಬೆಳೆಯುತ್ತಾ ಬೆಳೆಯುತ್ತಾ ಕಡ್ಡಿ ಕಸ ತುಂಬಿಕೊಂಡು ಹೊಲಸೆದ್ದು ಹೋಗುತ್ತಿದೆ ಎಂದು ಮನಸಿನಲ್ಲೇ ಅಂದುಕೊಂಡ ಅವನು, ನಿಕ್ರುಜೇಬಿನಲ್ಲಿದ್ದ ಬೀಡಿಕಟ್ಟಿಗೆ ಕೈ ಹಾಕಿ ಬೀಡಿಯೊಂದನ್ನು ಎಳೆದುಕೊಂಡು ತುಟಿಗಳ ನಡುವೆ ಸಿಕ್ಕಿಸಿಕೊಂಡು ಬೀಡಿ ಮೂತಿಗೆ ಕಡ್ಡಿ ಗೀರಿದ. ಬಾಯಿಂದ ಬಿಡುತ್ತಿದ್ದ ಬೀಡಿ ಹೊಗೆಯು ಮೂಗಿಗೆ ಹಿತವೆನಿಸುತ್ತಿತ್ತು. ಆದರೆ ನಿಷ್ಕಲ್ಮಶ ಕಾಡಿನೊಳಗೆ ಹಬ್ಬುತ್ತಾ ಸುಮಾರು ದೂರ ಸಾಗಿ ಹೋಗಿತ್ತು. ಗೀರಿದ ಕಡ್ಡಿಯ ಬೆಳಕಲ್ಲೇ ಕಣ್ಣಳತೆಗೂ ಮೀರಿ ನೋಡಿದ. ಎಣಿಕೆಗೆ ಸಿಗದ ಮರಗಳು ಪೊದೆ, ಮೂಗುತ್ತಗಳೇ ಕಂಡವು. ಗೀರಿದ ಕಡ್ಡಿಗಳು ತರಗೆಲೆಯ ಮೇಲೆ ಎಸೆದರೆ ಕಡ್ಡಿ ಜೀವ ಪಡೆದು ಇಡೀ ಕಾಡನ್ನೇ ಸುಡುವುದು ಖಚಿತ ಎಂದು ಬೆರಳುಗಳಿಂದ ಒಸಕಿ ಎಸೆದ. ಕಾಡಿನ ತುದಿ ಎತ್ತ ಸಾಗಿದೆಯೋ ಏನೋ? ಇಲ್ಲೇ ಸೋತು ಕೂತುಬಿಟ್ಟರೆ ದಾರಿ ಸಾಗುವುದು ಕಷ್ಟವಾಗಬಹುದು ಎಂದುಕೊಂಡವನು, ಮತ್ತೆ ಕಡ್ಡಿ ಗೀರಿ ಕೈ ನೋಡಿಕೊಂಡ. ಗಡಿಯಾರವೇ ಇಲ್ಲ! ಛೇ, ಮರೆತು ಬಂದೆನಲ್ಲ ಎಂದುಕೊಂಡು ಬೆಂಕಿಪೊಟ್ಟಣ ಬಿಚ್ಚಿ ಕಡ್ಡಿ ಗೀರಿ ಆ ಬೆಳಕಿನಲ್ಲಿ ಸ್ವಲ್ಪ ದೂರ ನಡೆದ. ಕಡ್ಡಿಪೆಟ್ಟಿಗೆಯಲ್ಲಿನ ಕಡ್ಡಿಗಳು ಇಳಿಮುಖವಾಗುತ್ತಾ ಬಂದವು. ಕೇವಲ ಮೂರೋ ನಾಲ್ಕೋ ಕಡ್ಡಿಗಳು ಮಾತ್ರ ಇರುವಂತೆ ಕಂಡವು. ಮುಂದಿನ ದಾರಿಗೆ ಬೆಳಕಿಲ್ಲದ್ದನ್ನು ನೆನಪಿಸಿಕೊಂಡವನಿಗೆ ಭಯ ಹೆಗಲೇರಿ ಕೂತಿತು. ಇರುವ ಬೆಂಕಿಕಡ್ಡಿಗಳನ್ನು ತೀಡಿಕೊಂಡು ಹೋದರೆ ಕೇವಲ ಒಂದು ಫರ್ಲಾಂಗೂ ಹೋಗುವುದಿಲ್ಲ ಎಂಬುದು ಗೊತ್ತಿದೆ. ಆದರೆ ಹೋಗದೆ ವಿಧಿಯಿಲ್ಲ. ದಾರಿ ಸಾಗಲೇಬೇಕು.

ಖಾಲಿಯಾದ ಬೆಂಕಿಪೊಟ್ಟಣವನ್ನು ಎಸೆದು ಸುಮ್ಮನೆ ನಿಂತವನ ಕಣ್ಣಿಗೆ ದಾರಿಯಿಲ್ಲ. ಆದರೂ ಕಡ್ಡಿ ತೀಡಿದಾಗ ನೋಡಿದ್ದ ಜಾಗದವರೆಗೂ ಒಂದು ಅಂದಾಜಿನ ಮೇಲೆ ನಡೆದ. ಅಲ್ಲಿಂದ ಜಪ್ಪಯ್ಯ ಅಂದರೂ ಕಾಲೆತ್ತಿಡಲಾಗಲಿಲ್ಲ. ಸುಮ್ಮನೆ ಅಲ್ಲಿನ ಒಂದು ಮರದ ಬುಡಕ್ಕೆ ಬೆನ್ನಾಕಿ ಉಸ್ಸೆನ್ನುತ್ತಾ ಕೂತ. ದೂರದಲ್ಲೆಲ್ಲೋ ನರಿಗಳು ಕೂಗುವ ಶಬ್ದ ಕೇಳುತ್ತಿತ್ತು. ಅವನು ಮಾಗಿಕಾಲದಲ್ಲಿ ಕಣಕ್ಕೆ ಹುಲ್ಲಾಕಿ, ಹುಲ್ಲಿನೊಳಗೆ ತೂರಿಕೊಂಡು ಮಲಗಿದಾಗ ಕೇಳುತ್ತಿದ್ದ ಮಾಮೂಲಿ ಶಬ್ದವಾಗಿದ್ದರಿಂದ ಭಯವೇನು ಅನ್ನಿಸಲಿಲ್ಲ. ಸುಮ್ಮನೆ ಆಲಿಸುತ್ತಾ ಕೂತ.

ಇದ್ದಕ್ಕಿದ್ದಂತೆ ದೂರದಲ್ಲೆಲ್ಲೋ ಯಾರೋ ನಡೆದು ಬರುತ್ತಿರುವ ಸರಪರ ಸದ್ದು ದೊಪ್ಪನೆ ಕಿವಿಗಳಿಗೆ ಬಿದ್ದಿತು. ಸೂಕ್ಷ್ಮವಾಗಿ ಕಿವಿಗೊಟ್ಟು ಮತ್ತೂ ಆಲಿಸಿದ. ಹೌದು, ದೂರದಲ್ಲೆಲ್ಲೋ ಯಾರೋ ನಡೆದು ಬರುತ್ತಿದ್ದಾರೆ. ಯಾರಿರಬೇಕು? ಅದೂ ಇಂತಹ ದೆವ್ವದ ಕತ್ತಲಲ್ಲಿ ಎಂದುಕೊಂಡವನ ಮನಸ್ಸಿನಲ್ಲಿ ಭಯ ಜಾಗೃತಗೊಂಡಿತು.

ಯಾರು ನಡೆದು ಬರುತ್ತಿರಬಹುದು ಎಂದು ಯೋಚಿಸುತ್ತಿದ್ದವನಿಗೆ ಹೊಳೆದದ್ದು, ಇದು ಹಲಸಿನ ಕಾಲವಾದ್ದರಿಂದ ಬಹುಶಃ ಕರಡಿ ಇರಬಹುದೆಂದು. ಅದೇ ನಿಲುವಿನಲ್ಲಿ ಯೋಚಿಸತೊಡಗಿದ. ಅದಕ್ಕೇನಾದರೂ ನಾನು ಸಿಕ್ಕರೆ, ಉಳಿಯುವ ಯಾವ ಲಕ್ಷಣವೂ ಇಲ್ಲ. ಆದರೆ ಕತ್ತಲಲ್ಲಿ ಯಾರು ಯಾರನ್ನೂ ಗುರುತಿಸುವುದು ಕ?ವೇ ಎಂಬ ಭಂಡ ಧೈರ್ಯದ ಮೇಲೆ ಕೂತ. ಕರಡಿಗಳು ವಾಸನೆ ಹಿಡಿದೇ ಬರುತ್ತವೆ ಎಂದು ತಾತ ಹೇಳಿದ್ದ ಮಾತು ಭಯವನ್ನು ಇಮ್ಮಡಿ ಮಾಡಿತು. ಆ ನಡೆದು ಬರುತ್ತಿರುವ ಸದ್ದು ಹತ್ತಿರವಾಗುತ್ತಲೇ ಬಂತು. ಏನಾದರೂ ಆಗಲಿ ಎಂದು ನಿರ್ಧರಿಸಿಯೇ ಆಲಿಸುತ್ತ, ಅತ್ತಲೇ ನೋಡುತ್ತ ಕೂತ.

ಇದ್ದಕ್ಕಿದ್ದ ಹಾಗೆ ಸದ್ದು ಕ್ಷೀಣಿಸಿ, ನಿಗಿನಿಗಿ ಉರಿಯುತ್ತಿರುವ ಎರಡು ಕಣ್ಣುಗಳು ಅವನ ಕಡೆಯೇ ಬರುತ್ತಿರುವಂತೆ ಗೋಚರಿಸಿತು. ಮತ್ತೆ ಮತ್ತೆ ಕಣ್ಣುಜ್ಜಿಕೊಂಡು ನೋಡಿದ. ಉರಿವ ಕಣ್ಣುಗಳು ಇತ್ತಲೇ ಬರುತ್ತಿರುವುದು ಸೂರ್ಯ ಚಂದ್ರರಾ? ನಿಜ, ನೋಡು ನೋಡುತ್ತಲೇ ಹಾಗೇ ನೆಲದ ಮೇಲೆ ಪ್ರಜ್ಞೆ ತಪ್ಪಿ ಉರುಳಿದ.

ಆಗಲೇ ಮಸುಕು ಹರಿದು ಬರುತ್ತಿತ್ತು. ಕಾಡಿನ ಹಕ್ಕಿಪಕ್ಷಿಗಳು ಕಿಚಪಚವೆನ್ನುತ್ತಿದ್ದರೆ, ಕೋಗಿಲೆಗಳು ಕೂಹುಕೂಹು ಎಂದು ಇಂಪಾಗಿ ಕೂಗುತ್ತಿದ್ದವು. ದೂರದಲ್ಲೆಲ್ಲೋ ಆನೆಗಳು ಗೀಳಿಡುತ್ತಿದ್ದವು. ಯಾರೋ ಎಬ್ಬಿಸಿದ ಸ್ಪರ್ಶಕೆ ಎಚ್ಚರವಾದ! ಸುತ್ತಲೂ ನೋಡಿದ. ಯಾರೂ ಇರಲಿಲ್ಲ. ದಟ್ಟ ಕಾಡು, ನಿರ್ಜನ ಪ್ರದೇಶ ಬಿಟ್ಟರೆ, ಮನುಷ್ಯ ನಡೆದ ಯಾವುದೇ ಹೆಜ್ಜೆಯ ಜಾಡುಗಳಿರಲಿಲ್ಲ. ಮುಗಿಲಿಗೆ ಮುತ್ತಿಕ್ಕುವಂತೆ ಬೆಳೆದ ಮರಗಳು, ತರಾವರಿ ಹಕ್ಕಿ ಪಕ್ಷಿಗಳು, ಹಾವು, ಹುಳಹುಪ್ಪಟೆಗಳು ಸರಿದಾಡುತ್ತಿದ್ದವು. ಮತ್ತೆ ನೆನಪಾಯಿತು. ರಾತ್ರಿ ನೋಡಿದ್ದೇನು? ಏನೂ ಕಾಣುತ್ತಿಲ್ಲವಲ್ಲ! ಭ್ರಮೆಯೋ, ಕನಸೋ, ವಾಸ್ತವವೋ ಏನೂ ತಿಳಿಯುತ್ತಿಲ್ಲವಲ್ಲ ಎಂದುಕೊಂಡವನು ಇಲ್ಲೇ ಹತ್ತಿರದಲ್ಲೆಲ್ಲಾದರೂ ಹೊಳೆಯೋ, ದೊಡ್ಡ ಗುಂಡಿಯೋ ಇದ್ದೇ ಇರುತ್ತದೆ. ಮುಖ ತೊಳೆದುಕೊಂಡು ಬರೋಣವೆಂದು ಎದ್ದು ಹೊರಟ.

ಅಲ್ಲೇ ಸಮೀಪದಲ್ಲೇ ಯಾವುದೋ ಝರಿಯೊಂದು ಜುಳುಜುಳು ಹರಿಯುವ ಸದ್ದು ಕಿವಿತುಂಬಿತು. ಅಲ್ಲಿ ನೋಡಿದರೆ, ರೋಮಾಂಚನವಾಗುವಂತೆ ಐದಾರು ಝರಿಗಳು, ಪಕ್ಕದಲ್ಲೊಂದು ವಿಶಾಲವಾದ ಗುಂಡಿ ತುಂಬಿ ತುಳುಕುತ್ತಿದೆ. ತಿಳಿನೀಲಾಕಾಶದಷ್ಟು ಶುಭ್ರವಾದ ನೀರು. ಬೊಗಸೆ ತುಂಬಿ ನೀರು ಕುಡಿದ. ನಿಸರ್ಗದತ್ತ ನೀರಿನ ಮುಂದೆ ಮನುಷ್ಯ ಸ್ವಚ್ಛವೆನಿಸಲಾರ ಎನ್ನುತ್ತಾ ಮುಖಕ್ಕೆ ನೀರನ್ನೆರಚಿಕೊಂಡು ಮತ್ತೆ ನೀರನ್ನು ಬೊಗಸೆ ತುಂಬಲು ಬಗ್ಗಿದ. ಯಾವುದೋ ವಿಚಿತ್ರ ದೈತ್ಯಾಕೃತಿಯೊಂದು ನೀರಿನಲ್ಲಿ ಕಾಣಿಸುತ್ತಿದೆ. ಮತ್ತೆಮತ್ತೆ ಕಣ್ಣುಜ್ಜಿಕೊಂಡು ನೋಡಿದ. ಹೌದು ವಿಚಿತ್ರವಾಗಿದೆ. ಬೆನ್ನ ಕಡೆ ತಿರುಗಿ ನೋಡಿದ. ಹೌದು ಅದು ವಿಚಿತ್ರ ಮನುಷ್ಯನಂತಿರುವ ಆಕೃತಿ. ಬಿಡು, ಇನ್ನು ನನ್ನ ಕತೆ ಮುಗಿದೇಹೋಯಿತು ಅಂದುಕೊಂಡು ಅವನು ನಡುಗುತ್ತಾ, ಭಯದಿಂದಲೇ ಹಿಂತಿರುಗಿ ನೋಡಿದ. ನೀಳ ಕೇಶರಾಶಿಗಳು, ಎದೆಯ ಭಾಗವನ್ನೂ ಮೀರಿ ಬೆಳೆದ ಗಡ್ಡಗಳು, ಆದಿಜಾಂಬವನಂತೆ ದೇಹವಿಡೀ ರೋಮಗಳು, ಕೆಂಪನೆಯ ಕಣ್ಣುಗಳು, ಉದ್ದನೆಯ ಬಾಹುಗಳು, ಭುಜದಲ್ಲಿ ನೇತಾಡುತ್ತಿರುವ ಜೋಳಿಗೆ. ಮನುಷ್ಯನಲ್ಲದ ಮನುಷ್ಯನಂತೆ ಕಾಣುವ ಆಕೃತಿಯನ್ನು ನೋಡುತ್ತಿದ್ದವನು ಬೆವೆತು ನೀರಾದ. ಆ ಮೂರ್ತಿಯಿಂದ ಝೇಂಕಾರ ದುಂದುಬಿ ಮೊಳಗುತ್ತಿದೆ. ಇದು ನಾವು ಮರೆತ ನಮ್ಮ ಆತ್ಮವೇ ಅನಿಸುತ್ತಿದೆ. ಹೊಸ ಭಯವೂ ಆಕ್ರಮಿಸುತ್ತಿದೆ.

‘ಯಾಕೆ ಹಾಗೆ ನೋಡುತ್ತಿದ್ದೀಯಾ? ಹೆದರಬೇಡ. ಯಾರು ನೀನು? ಇಂತಹ ನಿರ್ಜನ ದಟ್ಟ ಕಾಡಿಗೆ, ಅದೂ ಈ ಸರಿಹೊತ್ತಿನಲ್ಲಿ ಯಾಕೆ ಬಂದೆ?’ ಪ್ರಶ್ನಿಸಿತು ಆಕೃತಿ.

‘ಹೌದು, ನಾನು ಈ ಕಾಡಿಗೆ ಬಂದಿರುವ ಸುಳಿವು ನಿನಗೆ ಹೇಗೆ ಸಿಕ್ಕಿತು?’ ಪ್ರಶ್ನಿಸಿದ ಮನುಷ್ಯ.

‘ಅಯ್ಯೋ ಪೆದ್ದ, ಇದು ಕಾಡು. ಇಲ್ಲಿ ಬೀಸುವ ಗಾಳಿ ನಿಷ್ಕಲ್ಮಶವಾದದ್ದು. ಇದರೊಟ್ಟಿಗೆ ಯಾವುದೇ ಅನಿಷ್ಟ ಗಾಳಿ ಬೆರೆಯುವುದಿಲ್ಲ. ಆದರೆ ಸರಿಹೊತ್ತಿನಲ್ಲಿ ಬೀಡಿ ಹೊಗೆ ಇಡೀ ಕಾಡಿನ ಗಾಳಿಯನ್ನೇ ಅಪವಿತ್ರಗೊಳಿಸಿ ನನ್ನ ಮೂಗಿನ ವಳ್ಳೆಗೂ ಬಡಿಯಿತು. ಆಗಲೇ ಸಿಕ್ಕಿದ್ದು ಮನುಷ್ಯನ ಆಗಮನದ ಸುಳಿವು. ನಿನ್ನತ್ತಲೇ ಬಂದೆ. ನೀನು ಪ್ರಜ್ಞೆ ತಪ್ಪಿ ಬಿದ್ದಿದ್ದೆ. ಎಷ್ಟೇ ತಟ್ಟಿದರೂ ಎದ್ದೇಳಲೇ ಇಲ್ಲ. ನೋಡೋಣ, ಯಾವಾಗಲಾದರೂ ಎಚ್ಚರವಾಗಬಹುದೆಂದು ನಿನ್ನ ಬೆನ್ನ ಹಿಂದಿನ ಮರದಲ್ಲಿ ಕುಂತು, ಬೆಳಗಾದ ಮೇಲೆ ನಿನ್ನ ಬೆನ್ನಾಡಿದೆ. ಹೇಳು, ಇಂತಹ ಸರಿಹೊತ್ತಿನಲ್ಲಿ ಪ್ರಾಣಭಯಕ್ಕೂ ಅಂಜದೆ ಈ ಕಾಡಿಗೆ ಏಕೆ ಬಂದೆ’ ಎನ್ನುತ್ತಾ ಮಾತು ನಿಲ್ಲಿಸಿತು.

‘ನಾನು ಈ ಕುರುಡು ನಾಗರಿಕ ಸಮಾಜದ ಕಣ್ಣಿಗೆ ಅಪವಿತ್ರ ಅಸ್ಪೃಶ್ಯ ಮನುಷ್ಯ. ನನಗೆ ಆ ನಾಗರಿಕ ಸಮಾಜದ ಗೋಜೆ ಬೇಡವೆನ್ನಿಸಿ ಇತ್ತ ಬಂದು ಬಿಟ್ಟೆ’ ಎಂದ.

‘ಬಿಡಿಸಿ ಹೇಳು, ಅರ್ಥವಾಗಲಿಲ್ಲ’ ಎಂದಿತು ಆಕೃತಿ.